# ಜಿಂದಗಿ ನ ಮಿಲೇ ದುಬಾರಾ..?

**ಪ್ರೀತಿಯ ಉಜ್ವಲತೆಯನ್ನು, ಸಂಸಾರದ ಆದರ್ಶಗಳನ್ನು ಸಿನಿಮಾದಲ್ಲಿ ನಟನೆಯ ಮೂಲಕ ಅದ್ವಿತೀಯವಾಗಿ ಕಟ್ಟಿಕೊಟ್ಟು, ಜನಪ್ರಿಯತೆಯ ತುತ್ತ ತುದಿಗೇರುವ ತಾರೆಯರು ತಮ್ಮ ಸ್ವಂತ ಮನೆಯನ್ನು ಸಂಭಾಳಿಸುವಲ್ಲಿ ಸೋಲುವುದೇಕೆ?**

■ ವಿಶಾಖ

ಹದಿನೇಳು ವರ್ಷದ ಹಿಂದಿನ ಮಾತು. ಸಂಜಯ್ ಖಾನ್ ತಾವೇ ನಿರ್ಮಿಸಿದ ಬೆಂಗಳೂರಿನ ಹೊರವಲಯದ ಐಷಾರಾಮಿ ರೆಸಾರ್ಟ್ ಗೋಲ್ಡನ್ ಪಾಲ್ಮ್‌ನ ಆವರಣವನ್ನು ಮಿರಮಿರ ಮಿಂಚುವಂತೆ ಮಾಡಿದ್ದರು. ಮಗಳ ಮದುವೆಯ ಆರತಕ್ಷತೆ ಸಮಾರಂಭ ಅದು. ವರ ಅದೇ ತಾನೇ ತನ್ನ ಅಂಗಸೌಷ್ಠವ, ನೃತ್ಯ ಪ್ರತಿಭೆಯ ಮೂಲಕ ಯುವಜನರ ಮನ ಗೆದ್ದಿದ್ದ ಹೃತಿಕ್ ರೋಷನ್. ಆ ಆರತಕ್ಷತೆಯ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ಬೆಂಗಳೂರಷ್ಟೇ ಅಲ್ಲದೆ ಎಲ್ಲೆಲ್ಲಿಂದಲೋ ಅಭಿಮಾನಿಗಳು ಬಂದಿದ್ದರು. ರೆಸಾರ್ಟ್‌ನ ಕಾಂಪೌಂಡ್ ಹೊರಗಡೆ ನಿಂತು ಮೆಟ್ಟಂಗಾಲಿಟ್ಟುಕೊಂಡು ಇಬ್ಬರ ಒಂದೇ ಒಂದು ಝಲಕ್‌ಗಾಗಿ ತಹತಹಿಸಿದ್ದರು.

ಅಂಥ ದೊಡ್ಡ ಸುದ್ದಿಯಾಗಿದ್ದ ಮದುವೆ ಈಗ ಮುರಿದು ಬಿದ್ದಿದೆ. ವಧುವಿನದ್ದು ಮುಸ್ಲಿಂ ಕುಟುಂಬ. ವರನ ಮನೆಯವರು ಗಣೇಶನ ಭಕ್ತರು. ಅವರವರ ಮನೆಯವರೇ ಮೆಚ್ಚಿ ಮಾಡಿದ ಮದುವೆ ಅದೇನಲ್ಲ.

ಜುಹೂ ಕಡಲತಟದಲ್ಲಿ ಹೃತಿಕ್ ಥೇಟ್ ಸಿನಿಮೀಯ ಶೈಲಿಯಲ್ಲಿ ಸುಸೇನ್ ಖಾನ್‌ಗೆ ಪ್ರೇಮ ನಿವೇದನೆ ಮಾಡಿದ್ದು ಒಂದು ಪ್ರೇಮಿಗಳ ದಿನದಂದು. ಅದಕ್ಕೂ ಮೊದಲು ವಿದೇಶದಲ್ಲಿ ಕಲಿತು ಬಂದ ಸುಸೇನ್ ಟ್ರಾಫಿಕ್ ಸಿಗ್ನಲ್‌ನಲ್ಲಿ ಪಕ್ಕದ ಕಾರಿನಲ್ಲಿ ಇದ್ದ ಹೃತಿಕ್ ಕಣ್ಣಿಗೆ ಬಿದ್ದದ್ದು ಇನ್ನೊಂದು ಸಿನಿಮೀಯ ದೃಶ್ಯವೇ ಹೌದು. ಅದಕ್ಕೂ ಮೊದಲು ತಮ್ಮ ಹನ್ನೆರಡನೇ ವಯಸ್ಸಿನಿಂದಲೇ ಹೃತಿಕ್ ಈ ಹುಡುಗಿಯನ್ನು ಮೋಹಿಸಿದ್ದರು. ಆಮೇಲೆ ಅದು ಪ್ರೀತಿಯಾಗಿ ಗಟ್ಟಿಗೊಂಡಿತ್ತು. ಇವರಿಬ್ಬರ ಕಣ್ಣುಗಳು ಟ್ರಾಫಿಕ್ ಸಿಗ್ನಲ್‌ನಲ್ಲಿ ಕಲೆತ ದೃಶ್ಯವನ್ನೇ ಹೃತಿಕ್ ತಮ್ಮ ಮೊದಲ ಚಿತ್ರ 'ಕಹೋ ನಾ ಪ್ಯಾರ್ ಹೈ'ನಲ್ಲಿ ಅಳವಡಿಸಿದ್ದರೆಂಬುದು ಇನ್ನೊಂದು ವಿಶೇಷ.

ಎರಡು ಮಕ್ಕಳ ಹಡೆದ ಸುಸೇನ್, ಅತ್ತೆ–ಮಾವನ ಜೊತೆ ಮೊದಮೊದಲು ಚೆನ್ನಾಗಿಯೇ ಇದ್ದರು. ಇಂಟೀರಿಯರ್ ಡಿಸೈನ್, ವಸ್ತ್ರ ವಿನ್ಯಾಸ, ಸಿನಿಮಾ ನಿರ್ಮಾಣ ವ್ಯವಹಾರ ಎಲ್ಲವುಗಳನ್ನು ನೋಡಿಕೊಳ್ಳುವ ಹೊಣೆಗೂ ಹೆಗಲುಗೊಟ್ಟರು. ಹೃತಿಕ್ ನಟರಾಗಿ ಬೆಳೆದರು. ದೇಹಾಕಾರ ಸದಾ ಆಕರ್ಷಕವಾಗಿರುವಂತೆ ನಿಗಾ ವಹಿಸಿದರು. ಪೆಟ್ಟು ಬಿದ್ದಾಗ ಮುಲಾಮು ಹಚ್ಚಿದರು. ತಲೆಗೆ ದೊಡ್ಡ ಪೆಟ್ಟಾದಾಗ ಸರ್ಜರಿ ಮಾಡಿಸಿಕೊಂಡರು. ಬಿದ್ದ ಮೇಲೆ ಬೆನ್ನಿನಲ್ಲಿ ಯಮಯಾತನೆ ಕಾಣಿಸಿಕೊಂಡಾಗಲೂ ಜಗ್ಗಲಿಲ್ಲ.

ಹೃತಿಕ್ ಮನೆಯಲ್ಲಿ ಈ ವರ್ಷ ಗಣೇಶನ ಪೂಜೆ ಕಳೆಗಟ್ಟಲಿಲ್ಲ. ಮನೆಯಲ್ಲಿ ಸೊಸೆ ಇರಲಿಲ್ಲ. ಅದನ್ನು ಗಮನಿಸಿದ ಸುದ್ದಿಮಿತ್ರರಿಗೆ ಹೃತಿಕ್ ಮನೆಯವರು, 'ತವರಿಗೆ ಹೋಗಿದ್ದಾಳೆ' ಎಂದು ಸಬೂಬು ಹೇಳಿದರು.

ಅತ್ತೆ– ಮಾವ– ಸೊಸೆ ನಡುವೆ ಅದಾಗಲೇ ಮಾತು ಶುರುವಾಗಿತ್ತು. 'ಕೈಟ್ಸ್' ಸಿನಿಮಾ ಮಾಡಿದಾಗ ವಿದೇಶಿ ನಟಿ ಬಾರ್ಬರಾ ಮೋರಿ ಜೊತೆ ಹೃತಿಕ್‌ಗೆ ಅಫೇರ್ ಇದೆ ಎಂಬ ಸುದ್ದಿ ಹೊಗೆಯಾಡ ತೊಡಗಿದ್ದಾಗ, ಸುಸೇನ್ ಒಂದಿಷ್ಟು ದಿನ ಮುನಿಸಿಕೊಂಡು ಮನೆ ಖಾಲಿ ಮಾಡಿದ್ದರು. ಮೋರಿ ಹೋದ ಮೇಲಷ್ಟೇ ಅವರು ಮನೆಗೆ ಮರಳಿದ್ದು.

ಈಗ ಸಮಸ್ಯೆ ದೊಡ್ಡದಾಗಿದೆ. ಸುಸೇನ್‌ಗೆ ಹೃತಿಕ್ ಜೊತೆ ಬದುಕಲು ಇಷ್ಟವಿಲ್ಲ. ಇಬ್ಬರು ಗಂಡು ಮಕ್ಕಳನ್ನು ಕರೆದುಕೊಂಡು ಅವರು ತಮ್ಮ ಬದುಕು ಕಟ್ಟಿಕೊಳ್ಳಲು ನಿರ್ಧರಿಸಿ ಆಗಿದೆ. 'ವಿಚ್ಛೇದನವಿಲ್ಲದೆ ವಿಧಿಯಿಲ್ಲ' ಎಂದು ಹೃತಿಕ್ ಲಾಸ್ ಏಂಜಲೀಸ್‌ನಲ್ಲಿ ಏಕಾಂತದಲ್ಲಿ ಕುಳಿತೇ ಒಂದು ಪತ್ರಿಕಾ ಹೇಳಿಕೆ ಕಳುಹಿಸಿ ವಿಷಯ ದಾಟಿಸಿದ್ದಾರೆ.

ಹದಿನೇಳು ವರ್ಷದ ದಾಂಪತ್ಯ, ಅದಕ್ಕೂ ಮುಂಚಿನ ದಶಕದ ಪ್ರೀತಿ ಎಲ್ಲವನ್ನೂ ಮೀರಿದ ಬದುಕಿನ ವಾಸ್ತವದ ಎದುರು ಹೃತಿಕ್ ಮಂಡಿಯೂರಿ ನಿಂತಿದ್ದಾರೆ. 'ಮನೆಯನ್ನೂ ತಮ್ಮನ್ನೂ ನಿರ್ಲಕ್ಷಿಸಿ ಸದಾ ವೃತ್ತಿ ಬದುಕಿಗೇ ಅರ್ಪಿಸಿಕೊಂಡ ಗಂಡನ ತಾತ್ಸಾರವನ್ನು ಸಹಿಸುವುದು ಸಾಧ್ಯವೇ ಇಲ್ಲ. ಅದಕ್ಕೇ ಈ ನಿರ್ಧಾರ' ಎಂದು ಸುಸೇನ್ ಆಪ್ತೇಷ್ಟರಲ್ಲಿ ಹೇಳಿಕೊಂಡಿದ್ದಾರೆ.

ಈಗ ಅವರಿಬ್ಬರಿಗೂ ಬೇಕಿರುವುದು ಏಕಾಂತ. ಅವರ ಪಾಡಿಗೆ ಅವರನ್ನು ಬಿಟ್ಟುಬಿಡಿ ಎಂದು ಸುಸೇನ್ ತಂದೆ ಸಂಜಯ್ ಖಾನ್ ಎರಡೂ ಕೈಗಳನ್ನು ಕೊಡವಿಕೊಂಡು ನಿಂತಿದ್ದಾರೆ.

ಸಿನಿಮಾದಲ್ಲಿ ಪ್ರೀತಿಯ ಉಜ್ವಲತೆಯನ್ನು, ಸಂಸಾರದ ಆದರ್ಶಗಳನ್ನು ನಟನೆಯ ಮೂಲಕ ಅದ್ವಿತೀಯವಾಗಿ ಕಟ್ಟಿಕೊಟ್ಟು, ಜನಪ್ರಿಯತೆಯ ತುತ್ತ ತುದಿಗೇರುವ ತಾರೆಯರು ತಮ್ಮ ಸ್ವಂತ ಮನೆಯನ್ನು ಸಂಭಾಳಿಸುವಲ್ಲಿ ಸೋಲುವುದೇಕೆ? ತೆರೆಯ ಮೇಲೆ ಪ್ರೀತಿಯ ಬಗ್ಗೆ ಪುಂಖಾನುಪುಂಖ ಡೈಲಾಗ್‌ಗಳನ್ನು ಉದುರಿಸುವ ಹೀರೋಗಳು ಮನೆಯಲ್ಲಿ ಮಡದಿಯ ಪ್ರೀತಿಯಿಂದ ವಂಚಿತರಾಗುವುದೇಕೆ?

ಉತ್ತರ ಅಷ್ಟು ಸುಲಭದಲ್ಲಿ ಸಿಗುವುದಿಲ್ಲ. ಇನ್ನೊಂದು 'ತಾರಾ ಮದುವೆ' ಮುರಿದುಬಿದ್ದಿದೆ. ಮುಂದೇನು ಎಂದು ಹೃತಿಕ್ ಅಭಿಮಾನಿಗಳು ತುದಿಗಾಲಲ್ಲಿ ನಿಂತಿದ್ದಾರೆ. 'ಜಿಂದಗಿ ನ ಮಿಲೆ ದುಬಾರಾ' ಎನ್ನುವುದು ಎಷ್ಟು ನಿಜ!

